**4) ಸರ್ಕಾರಿ ಮೆಡಿಕಲ್ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಪಾವತಿಯಲ್ಲಿ ವಿಳಂಬವಾಗಿರುವುದು.**

ಶ್ರೀ ಬಿ.ಎಂ. ಇದಿನಬ್ಬ (ಶ್ರೀ ಜಿ. ಎಸ್. ಆಚಾರ್ ರವರ ಪರವಾಗಿ): ಸರಕಾರಿ ಮೆಡಿಕಲ್ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳೂ ಸಕಾಲದಲ್ಲಿ ಸ್ಟೈಪೆಂಡ್ ಪಾವತಿಯಾಗುತ್ತಿದೆ. ಆದರೆ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿರುವ ಸರಕಾರದಿಂದ ಆಯ್ಕೆಯಾದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಿಕೆಯಲ್ಲಿ ವಿಪರೀತ ವಿಳಂಬವಾಗುತ್ತಿದೆ. ಉದಾಹರಣೆಗೆ ಮಂಗಳೂರು ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಸರಕಾರಿ ಪಿ.ಜಿ. ವಿದ್ಯಾರ್ಥಿಗಳಿಗೆ 8 ತಿಂಗಳ ನಂತರ 1980ರ ಅಕ್ಟೋಬರ್ ತಿಂಗಳಲ್ಲಿ ಕೊಡಲಾಯಿತು. ಅದೂ ಕೇವಲ 5 ತಿಂಗಳಿಗೆ ಮಾತ್ರ. ಅಲ್ಲಿನಿಂದ ಇಲ್ಲಿತನಕ ವಿಳಂಬವಾಗುತ್ತಲೇ ಇದೆ. ಪ್ರತಿ ತಿಂಗಳೂ ನೀಡುವ ಬದಲು 4-5 ತಿಂಗಳಿಗೊಮ್ಮೆ ಪಾವತಿಯಾಗುತ್ತಿದೆ. ಈ ವ್ಯವಸ್ಥೆಯಿಂದಾಗಿ ಸದರಿ ಸ್ನಾತಕೋತ್ತರ ವಿದ್ಯಾರ್ಥಿಗಳು ಒಂದೆ ಸಾಲ ಮಾಡಬೇಕು, ಇಲ್ಲವೇ ಉಪವಾಸ ಬೀಳಬೇಕು. ಹೊಟ್ಟೆಗೆ ಹಿಟ್ಟಿಲ್ಲದಿರುವಾಗ ಸ್ನಾತಕೋತ್ತರ ವಿದ್ಯಾರ್ಜನೆ, ಸಂಶೋಧನೆ ಕಾರ್ಯಗಳು ಹೇಗೆ ಮಾಡಲು ಸಾಧ್ಯ? ಸರಕಾರ ಆಯ್ಕೆ ಮಾಡಿದ ಖಾಸಗಿ ಕಾಲೇಜು ವಿದ್ಯಾರ್ಥಿಗಳಿಗೆ ಒಂದು ನೀತಿ ಸರಕಾರೀ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇನ್ನೊಂದು ನೀತಿ ಆಗಬಾರದು. ಬಾಕಿಯಿರುವ ಸ್ಟೈಫಂಡ್ ಕೂಡಲೇ ಪಾವತಿಸಬೇಕು. ಮುಂದೆ ಪ್ರತಿ ತಿಂಗಳೂ ಕ್ಲುಪ್ತ ಕಾಲದಲ್ಲಿ ಪಾವತಿ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ಆರೋಗ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಾಗೂ ಹೌಸ್ ಸರ್ಜನ್ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸ್ಟೈಫೆಂಡ್ ಒಂದೇ ಆರ್ಥಿಕ ವರ್ಷದಲ್ಲಿ ಅಂದರೆ 1990-91 ರಲ್ಲಿ ಎರಡು ಸಾರಿ ಪ್ರತಿ ವಿದ್ಯಾರ್ಥಿಗೆ 200.00 ರೂಪಾಯಿಗಳಂತೆ ಹೆಚ್ಚಿಸಲಾಯಿತು. ಇದರ ಪರಿಣಾಮವಾಗಿ ಆಯವ್ಯಯದಲ್ಲಿ ನೀಡಿರುವ ಹಣವು ಸಾಲದಾಯಿತು. 31.3.1991ರವರೆಗೆ ನೀಡಬೇಕಾದ ಸ್ಟೈಪೆಂಡ್ ಹಣಕ್ಕಾಗಿ ಹೆಚ್ಚುವರಿ ಹಣವನ್ನು ಒದಗಿಸಬೇಕೆಂದು ಹಾಗೂ ಬೇರೆ ಲೆಕ್ಕ ಶೀರ್ಷಿಕೆಯಲ್ಲಿ ವಿಚ್ಛಾಗದೇ ಇದ್ದ ಹಣವನ್ನು ಉಪಯೋಗಿಸಲು ಅನುಕೂಲವಾಗುವಂತೆ ಪ್ರಸ್ತಾವವನ್ನು ನಿರ್ದೇಶಕರು ಸರ್ಕಾರಕ್ಕೆ ಈಗಾಗಲೇ ಕಳುಹಿಸಿದ್ದು, ಈ ಬಗ್ಗೆ ಸಂಬಂಧಿಸಿದ ಕಡತವು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆಯು ಒಪ್ಪಿಗೆ ನೀಡಿದ ನಂತರ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸಿ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

**5) ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಕರ್ಯ ಒದಗಿಸುವ ಬಗ್ಗೆ**

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಭಾಗಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಕಳೆದ 2 ತಿಂಗಳಿಂದ ಪ್ರಾರಂಭವಾಗಿರುತ್ತದೆ. ಅದರಲ್ಲೂ ನನ್ನ ಕ್ಷೇತ್ರಕ್ಕೆ ಒಳಪಟ್ಟ, ಜಪ್ಪಿನಮೊಗ್ರು, ಮಾಂಕಾಳಿಪದ್ಮ, ಜೆಪ್ಪು, ಬೋಳಾರ ಮಂಗಳಾದೇವಿ ಮೊದಲಾದ ವಠಾರಗಳಲ್ಲಿ ಕೆಲವು ವಾರಗಳಿಂದ ನೀರೇ ಬರುತ್ತಿಲ್ಲ. ಲೋಒಲ್ಟೇಜಿನಿಂದಾಗಿ ಎಲ್ಲಾ ಕಡೆಗೆ ನಲ್ಲಿ ನೀರು ಒದಗಿದ ಮೇಲೆ ಕಟ್ಟ ಕಡೆಗೆ ಜೆಪ್ಪು, ಬೋಳಾರ ಸರಹದ್ದಿಗೆ ನೀರು ಬರುತ್ತಿರುವುದರಿಂದ ಈ ವಠಾರಕ್ಕೆ ಕುಡಿಯುವ ನೀರೇ ದೊರೆಯುತ್ತಿಲ್ಲ. ಆದ್ದರಿಂದ ಆ ಬಾಗದ ಜನರು ತುಂಬಾ ಕಂಗಾಲಾಗಿರುತ್ತಾರೆ. ಕುಡಿಯುವ ನೀರು ಇಲ್ಲದೆ ಕಣ್ ಬಿಡುತ್ತಿದ್ದಾರೆ. ಈಗಲೇ ಹೀಗಾದರೆ ಏಪ್ರಿಲ್ ಮೇ ತಿಂಗಳಲ್ಲಿ ಭಾರೀ

ತೊಂದರೆಯಾಗಲಿದೆ. ಈಗ ಏಕೆ ಹೀಗಾಗುತ್ತಿದೆ? ಆದ್ದರಿಂದ ಇದನ್ನು ತುರ್ತಾಗಿ ಭಾವಿಸಿ ಕುಡಿಯುವ ನೀರು ಒದಗಿಸಿ ಸಿಕ್ಕುವಂತೆ ಮಾಡಬೇಕು. ಈ ಕುರಿತು ನಗರಾಭಿವೃದ್ದಿ ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ದಿ ಸಚಿವರು ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾವೂರು ಪ್ರದೇಶದ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ವಿದ್ಯುತ್ ಪರಿವರ್ತವು (ಟ್ರಾನ್‌ಪಾರ್ಮರ್) ಸುಮಾರು ಎರಡು ತಿಂಗಳ ಹಿಂದೆ ಕೆಟ್ಟು ಹೋಗಿರುತ್ತದೆ. ವಿದ್ಯುಚ್ಛಕ್ತಿ ಮಂಡಳಿಯು ತಾತ್ಕಾಲಿಕವಾಗಿ ದುರಸ್ತಿ ಮಾಡಿ ಕಡಿಮೆ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸಿದ್ದು, ಇದರ ನಿಮಿತ್ತ ಇದಕ್ಕೆ ಬೇಕಾದ ಎರಡು ಪಂಪುಗಳನ್ನು ಅವಿರತವಾಗಿ ನಡೆಸಲು ಸಾಧ್ಯವಾಗುತ್ತಿಲ್ಲ. ಪ್ರತಿ ದಿವಸ ಕನಿಷ್ಟ 5 ಗಂಟೆಗಳ ವಿರಾಮವನ್ನು ನೀಡಬೇಕಾಗುತ್ತದೆ. ಆದ್ದರಿಂದ ಪಂಪು ಮಾಡಬೇಕಾದಂತಹ ನೀರಿನ ಪ್ರಮಾಣವು ಕಡಿಮೆಯಾಗಿರುತ್ತದೆ. ಆದ್ದರಿಂದ ಸೂಚನೆಯಲ್ಲಿ ನಮೂದಿಸಿದ ಸ್ಥಳಗಳು ಸರಬರಾಜು ವ್ಯವಸ್ಥೆಯ ಕೊನೆಯಲ್ಲಿರುವುದರಿಂದ ಈ ಸ್ಥಳಗಳಿಗೆ 'ಅದರಲ್ಲೂ ವಿಶೇಷವಾಗಿ ಎತ್ತರದಲ್ಲಿರುವ ಮನೆಗಳಿಗೆ , ಸಾಕಷ್ಟು ಪ್ರಮಾಣದಲ್ಲಿ ನೀರು ದೊರೆಯುತ್ತಿಲ್ಲ. ಈ ಸಮಸ್ಯೆಯನ್ನು ಹೋಗಲಾಡಿಸಲು ಸಧ್ಯಕ್ಕೆ ಬೇರೆ ಪ್ರದೇಶಗಳಲ್ಲಿ ನೀರಿನ ಸರಬರಾಜಿನ ವೇಳೆಯನ್ನು ಕಡಿತಗೊಳಿಸಿ ಸಮಸ್ಯಾತ್ಮಕ ಪ್ರದೇಶಗಳಿಗೆ ನೀರನ್ನುಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರ ನಿಮಿತ್ತ ಎರಡು-ಮೂರು ದಿನಗಳಲ್ಲಿ ಈ ಪ್ರದೇಶಗಳಲ್ಲಿ ನೀರಿನ ಸರಬರಾಜನ್ನು ಸ್ವಲ್ಪಮಟ್ಟಿಗೆ ಸುಧಾರಿಸಲ್ಲಾಗಿದೆ. ವಿದ್ಯುತ್ ಪರಿವರ್ತಕವನ್ನು ತೀವ್ರವಾಗಿ ರಿಪೇರಿ ಮಾಡಿಕೊಡಲು ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಈಗಾಗಲೇ ವ್ಯವಹರಿಸಲಾಗಿದೆ. ವಿದ್ಯುಚ್ಛಕ್ತಿ ಮಂಡಳಿಯು 9-3-1991ರೊಳಗಾಗಿ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಆಶ್ವಾಸನೆಯನ್ನು ನೀಡಿರುತ್ತದೆ. ಸಮಸ್ಯೆಯು ಗಂಭೀರವಾದಲ್ಲಿ ಈ ಪ್ರದೇಶಗಳಿಗೆ ಟ್ಯಾಂಕರ್‌ಮೂಲಕ ನೀರನ್ನು ಸಾಗಾಣಿಕೆ ಮಾಡಲಾಗುವುದು. ಮಂಗಳೂರು ನಗರದೊಳಗಿನ ನೀರು ಸರಬರಾಜನ್ನು ಮಂಗಳೂರು ಮಹಾನಗರ ಪಾಲಿಕೆಯು ನೋಡಿಕೊಳ್ಳುತ್ತದೆ.

## ಶಾಸನ ರಚನಾ ಕಾರ್ಯಕಲಾಪಗಳು

## 1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕ.

## ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಧರ್ಮಸಿಂಗ್ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ,1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.